ಕರ್ನಾಟಕ ಸರ್ಕಾರ
(ಕನ್ನಡ ಮತ್ತು ಸಂಸ್ಕೃತಿ ಇಲಾಖೆ)

**ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು [ಕಾವಾ], ಸಿದ್ದಾರ್ಥ ನಗರ, ಮೈಸೂರು**

**Chamarajendra Government College of Visual Arts [CAVA], Siddarthanagara, Mysuru**

## ಶ್ರೀ ನಾಗಶೇಖರ್, ಖ್ಯಾತ ಚಲನಚಿತ್ರ ನಿರ್ದೇಶಕರು ಬೆಂಗಳೂರು

**ಇವರದಿಂದ ಸಂವಾದ ಕಾರ್ಯಕ್ರಮ ದಿನಾಂಕ: 07.07.2023**

### ನಿಮ್ಮದೆ ಆದ ವಿಭಿನ್ನ ಶೈಲಿಯನ್ನು ಬೆಳೆಸಿಕೊಳ್ಳಿ: ನಿರ್ದೇಶಕ ನಾಗಶೇಖರ

ಮೈಸೂರು - ಯಾವುದೇ ಕೆಲಸ ಮಾಡಿದರು ಸ್ಟೈಲಿಷ್ ಆಗಿ ಮಾಡಿ ಎಂದು ಹೆಸರಾಂತ ಚಲನಚಿತ್ರ ನಿರ್ದೇಶಕ ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು. ನಗರದ ಕಾವಾ ಕಾಲೇಜಿನಲ್ಲಿ ಜುಲೈ 07 ರಂದು ಏರ್ಪಡಿಸಿದ್ದ ವಿದ್ಯಾರ್ಥಿಗಳೊಂದಿಗೆ ಸಂವಾದ ಕಾರ್ಯಾಕ್ರಮಗಳಲ್ಲಿ ಮುಖ್ಯ ಅತಿಥಿಯಾಗಿ ಭಾಷಣ ಮಾಡುತ್ತಾ ನಾವು ಯಾವುದೇ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಬೇಕಾದರೆ ಮಾಡುವ ಕೆಲಸ ವಿಶೇಷವಾಗಿರಬೇಕು ಎಂದರು.




ಕಾವಾ ಕಾಲೇಜಿನ ಅಧ್ಯಾಯನ ವಿಷಯಗಳು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸಿನಿಮಾ ರಂಗಕ್ಕೆ ಸಂಬಂಧಿಸಿದ್ದು ಇಲ್ಲಿ ಅಧ್ಯಾಯನ ಮಾಡುವ ವಿದ್ಯಾರ್ಥಿಗಳು ತಮ್ಮ ಭವಿಷ್ಯದ ಉದೋಗವನ್ನು ಸಿನಿಮಾ ಕ್ಷೇತ್ರದಲ್ಲಿಯೂ ರೂಪಿಸಿಕೊಳ್ಳಬಹುದು ಎಂದು ಮನದಟ್ಟು ಮಾಡಿದರು.

ತಮ್ಮ ಸಿನಿಮಾ ಬದುಕಿನ ಪ್ರಯಾಣವನ್ನು ಸ್ವಾರಸ್ಯಕರವಾಗಿ ಹಂಚಿಕೊಳ್ಳುವುದರೊಂದಿಗೆ ಸಿನಿಮಾ ಕ್ಷೇತ್ರದ ವಿವಿಧ ಕಾರ್ಯಾಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು.

ವಿದ್ಯಾರ್ಥಿಗಳು ಕೇಳಿದ ಪ್ರಶ್ನೆಗಳಿಗೆ ಉತ್ತರ ನೀಡಿದರು. ವಿದ್ಯಾರ್ಥಿನಿಯೊಬ್ಬರು ಕೇಳಿದ ಸಿನಿಮ ಕ್ಷೇತ್ರದಲ್ಲಿ ಮಹಿಳೆಯರಿಗೆ ಆರೋಗ್ಯಕರ ವಾತಾವರಣ ಇದೆಯೆ? ಎಂಬ ಪ್ರಶ್ನೆಗೆ ಉತ್ತರಿಸುತ್ತಾ ಸಿನಿಮಾ ವೃತ್ತಿಯನ್ನು ಶ್ರದ್ದೆಯಿಂದ ನಿರ್ವಹಿಸುವವರಿಗೆ ಒಳ್ಳೆಯ ವಾತಾವರಣವಿದ್ದು ಮಹಿಳೆಯರು ಗೌರವಯುತವಾಗಿ ಸಾಧನೆ ಮಾಡಲು ಸಂಪೂರ್ಣ ಅವಕಾಶವಿದೆ ಎಂದು ಆತ್ಮವಿಶ್ವಾಸ ತುಂಬಿದರು.




ಸಂವಾದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕಾವಾ ಸಂಸ್ಥೆಯ ಡೀನ್ ದೇವರಾಜು .ಎ, ಕ.ಆ.ಸೇ ರವರು, ವಿದ್ಯಾರ್ಥಿಗಳು ತಮ್ಮ ಉದ್ಯೋಗವಕಾಶ ಕ್ಷೇತ್ರಗಳನ್ನು ವಿಸ್ಥರಿಸಿಕೊಳ್ಳುವಲ್ಲಿ ಕೌಶಲ್ಯ ವೃದ್ದಿಸಿಕೊಂಡು ತಮ್ಮ ಭವಿಷ್ಯರೂಪಿಸಿಕೊಳ್ಳಬೇಕು ಎಂದರು.

ಶೈಕ್ಷಣಿಕ ಸಂಯೋಜಕರಾದ ಬಿಂದುರಾಯ ಬೀರಾದರ್ ಅವರು ಸಂವಾದ ಕಾರ್ಯಕ್ರಮವನ್ನು ಸಂಯೋಜಿಸಿದರು. ಛಾಯಾಚಿತ್ರ ಮತ್ತು ಪತ್ರಿಕೋಧ್ಯಮ ವಿಭಾಗದ ಮುಖ್ಯಸ್ಥರಾದ ವೀರಣ್ಣ ಅರ್ಕಸಾಲಿ ಅವರು ಮುಖ್ಯ ಅಥಿತಿಗಳನ್ನು ಪರಿಚಯ ಮಾಡಿದರು. ಕುಂಚಕಾವ್ಯ ವಿದ್ಯಾರ್ಥಿ ಸಂಘದ ಕಾರ್ಯಾದರ್ಶಿ ಗಣ್ಯರನ್ನು ಸ್ವಾಗತಿಸಿದರೆ, ಡಾ. ನವೀನ್ ನಾರಾಯಣ ಗೌಡ ವಂದನಾರ್ಪಣೆ ಮಾಡಿದರು.



ಸಂಸ್ಥೆಯ ವಿದ್ಯಾರ್ಥಿಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ಮತ್ತು ಅತಿಥಿ ಉಪನ್ಯಾಸಕರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.




